ಅಕ್ರಮ-ಸಕ್ರಮ ನಿಯಮಗಳಲ್ಲಿ ದೋಷ

1643 - ಶ್ರೀ ಶಿವಾನಂದ ನಾಯ್ಕ (ಭಟ್ಕಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಲ್ಲಿ ದಯವಿಟ್ಟು ಉತ್ತರಿಸುವರೆ?

ಅ) ಅಕ್ರಮ ಸಕ್ರಮ ನಿಬಂಧನೆಗಳನ್ನು ಯಾವ ಆಧಾರದ ಮೇಲೆ ರೂಪಿಸಲಾಗಿದೆ?

ಆ) ರೈತರಿಗೆ ಇದರಿಂದಾಗುವ ಅನ್ಯಾಯವನ್ನು ಸರಿಪಡಿಸಲಾಗುವುದೇ?

ಶ್ರೀ ರಮೇಶ್ ಸಿ. ಜಗಜಿಣಗಿ (ಕಂದಾಯ ಸಚಿವರು) :

ಅ) ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94ಕ್ಕೆ ತಿದ್ದುಪಡಿ ಮಾಡಿ 1991ರಲ್ಲಿ ಕಲಂ 94ಎ, ಇದನ್ನು ಕಾಯ್ದೆಯಲ್ಲಿ ಸೇರ್ಪಡಿಸಲಾಗಿದೆ. ಸದರಿ ಕಾಯ್ದೆ ಅಡಿಯಲ್ಲಿ ಮಾಡಲಾದ ಕಾನೂನಿಗೆ ಒಳಪಟ್ಟಂತೆ ನಿಯಮಗಳನ್ನು ರಚಿಸಲಾಗಿರುತ್ತದೆ.

ಆ) ಇದರಿಂದ ರೈತರಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಬಗರ್ ಹುಕುಂ ಸಾಗುವಳಿ ಮಾಡಿದವರಿಗೆ ಜಮೀನು ಮಂಜೂರು

1644 - ಬಿ. ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಗರ್ ಹುಕುಂ ಸಾಗುವಳಿ ಮಾಡಿದವರಿಗೆ ಜಮೀನು ಮಂಜೂರು ಮಾಡುವಾಗ ಇಂಥಾದ್ದೆ ಬೆಳೆ ಬೆಳೆದಿರಬೇಕು ಎಂಬುದು ಕಡ್ಡಾಯ ಮಾಡಲಾಗಿದೆಯೇ?

ಆ) ಹಾಗಿದ್ದಲ್ಲಿ ಜಿಲ್ಲೆಯಿಂದ ಜಿಲ್ಲೆಗೆ ತಾಲ್ಲೂಕಿನಿಂದ, ತಾಲ್ಲೂಕಿಗೆ ಬೆಳೆಯುವ ಬೆಳೆಗಳು ವ್ಯತ್ಯಾಸ ಇರುವಾಗ ಈ ಕಡ್ಡಾಯ ಮಾಡಿರುವುದು ಸರಿಯೇ?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಪ್ಲಾಂಟರ್ಸ್ ಕಾಫಿ ಕ್ಯೂರಿಂಗ್ ವರ್ಕ್ಸ್ ಸಂಸ್ಥೆಗೆ ಕಂದಾಯ ಭೂಮಿ ಮಂಜೂರಾತಿ.

1645 - ಶ್ರೀ ಬಿ. ಬಿ. ಶಿವಪ್ಪ (ಸಕಲೇಶಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ, ಬೇಲೂರು ರಸ್ತೆಯಲ್ಲಿ ಪ್ಲಾಂಟರ್ಸ್ ಕಾಫಿ ಕ್ಯೂರಿಂಗ್ ವರ್ಕ್ಸ್ ಎಂಬ ಸಂಸ್ಥೆಗೆ ಕಂದಾಯ ಭೂಮಿ ನೀಡಲಾಗಿದೆಯೇ??

ಆ) ಹಾಗಿದ್ದಲ್ಲಿ ಯಾವಾಗ ಮತ್ತು ಎಷ್ಟು ಎಕರೆ ಜಾಗ ನೀಡಲಾಗಿದೆ?

ಇ) ಕೊಡುವ ಸಂದರ್ಭದಲ್ಲಿ ಯಾವುದಾದರೂ ಷರತ್ ಮೇಲೆ ಹಾಕಲಾಗಿದೆಯೇ?

ಈ) ಹಾಗಿದ್ದಲ್ಲಿ ಆ ಷರತ್ತುಗಳು ಏನು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

ಅ) ಹೌದು

ಆ) ಸದರಿ ಸಂಸ್ಥೆಗೆ 47-10 ಎಕರೆ ಕಂದಾಯ ಜಮೀನನ್ನು ಸರ್ಕಾರಿ ಆದೇಶ ಸಂಖ್ಯೆ ಆರ್‌ಡಿ 182 ಬಿಸಿಎಲ್ 68 ದಿನಾಂಕ : 14-11-1969 ರಲ್ಲಿ ಮಂಜೂರು ಮಾಡಲಾಗಿರುತ್ತದೆ.

ಇ) ಹೌದು.

ಈ) 1) ಯಾವ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿದೆಯೋ ಆ ಉದ್ದೇಶಕ್ಕೆ ಮತ್ತು ಮಂಜೂರಾದ ದಿನಾಂಕದಿಂದ ಎರಡು ವರ್ಷಗಳ ಒಳಗೆ ಉಪಯೋಗಿಸತಕ್ಕದ್ದು.

2) ಮಂಜೂರಿ ಪ್ರಾಧಿಕಾರಿಯ ಪೂರ್ವಾನುಮತಿ ಇಲ್ಲದೆ ಬೇರೆ ಉದ್ದೇಶಕ್ಕೆ ಆ ಜಮೀನನ್ನು ಉಪಯೋಗಿಸಬಾರದು;

3) ಮೇಲಿನ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಸದರಿ ಜಮೀನನ್ನು ಯಾವುದೇ ಪರಿಹಾರವಿಲ್ಲದೇ ಸರ್ಕಾರಕ್ಕೆ ಮುಟ್ಟುಗೋಲು ಹಾಕಿ ಕೋಳ್ಳಲಾಗುತ್ತೆ.

ಅಂಗನವಾಡಿ ಕಾರ್ಯಕರ್ತರ ವೇತನ

1648 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅಂಗನವಾಡಿ ಕಾರ್ಯಕರ್ತರ ಸಂಖ್ಯೆ ಎಷ್ಟು? (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು)

ಆ) ಈ ಕಾರ್ಯಕರ್ತರಿಗೆ ಹಾಲಿ ನೀಡುತ್ತಿರುವ ವೇತನ ಎಷ್ಟು? ಕಾರ್ಯಕರ್ತರಿಗೆ ವೇತನವನ್ನು ಹೆಚ್ಚಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಇ) ಹಾಗಿದ್ದಲ್ಲಿ ಎಷ್ಟು ಹೆಚ್ಚಿಸಲಾಗುವುದು? ಎಂದಿನಿಂದ ಹೆಚ್ಚಿಸಲಾಗುವುದು?

ಈ) ಇಲ್ಲದಿದ್ದರೆ ಕಾರಣಗಳೇನು?

ಶ್ರೀಮತಿ ವಿಮಲಾಬಾಯಿ ಜಗದೇವರಾವ್ ದೇಶಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ ಮಂಜೂರಾಗಿರುವ 185 ಸಮಗ್ರ ಬಾಲ ವಿಕಾಸ ಯೋಜನೆಗಳಲ್ಲಿ 39985 ಅಂಗನವಾಡಿ ಕೇಂದ್ರಗಳು ಮಂಜೂರಾಗಿದ್ದು, ಹಾಲಿ 38093 ಕಾರ್ಯಕರ್ತೆಯರು ಇರುತ್ತಾರೆ. ಜಿಲ್ಲಾವಾರು, ತಾಲ್ಲೂಕುವಾರು ವಿವರ ಲಗತ್ತಿಸಿದೆ. (ಅನುಬಂಧ)